

ಮಕ್ಕಳಲ್ಲಿ ಮೂತ್ರಕೋಶದ ನಿಯಂತ್ರಣವಿಲ್ಲದೆ ನಿದ್ರೆಯಲ್ಲಿ ಮೂತ್ರ ವಿಸರ್ಜಿಸುವ ಸಮಸ್ಯೆಗೆ ವೈದ್ಯಕೀಯ ಪರಿಭಾಷೆಯಲ್ಲಿ ಎನ್ಯುರೆಸಿಸ್ ಎನ್ನುತ್ತಾರೆ. ಇದು ಆನುವಂಶೀಯ ಕಾಯಿಲೆಯಲ್ಲ.

# ಹಾಸಿಗೆಯಲ್ಲಿ ಸುಸ್ಸೂ...

■ ನಿಧಿ ಪ್ರಸನ್ನ, ಉಡುಪಿ

ನಮ್ಮ ನೆರೆಮನೆಯ ಆಂಟಿ ಚಂದ್ರಿಕಾ ನನ್ನ ತಾಯಿಯ ಬಳಿ ಬಂದು ಒಂದು ದಿನ ಅವರ ಎಂಟು ವರ್ಷದ ಮಗಳು ದೀಪು ದಿನಾ ರಾತ್ರಿ ಮಲಗಿದ ಮೇಲೆ ಹಾಸಿಗೆಯಲ್ಲಿ ಮೂತ್ರ ಮಾಡುವಳು. ಎಷ್ಟೇ ಬೈದರೂ, ಹೊಡೆದರೂ ಅರ್ಥವೇ ಆಗುವುದಿಲ್ಲವೆಂದು ಹೇಳಿದರು. ಮಾತ್ರವಲ್ಲ ಅಮ್ಮನ ಮುಂದೆ ಕರೆದುಕೊಂಡು ಬಂದು ಹೀಯಾಳಿಸಿದರು. ಇದನ್ನು ನೋಡಿದ ನನಗೆ ಬೇಸರವಾಯಿತು. ಇದು ಮಕ್ಕಳ ಸಾಮಾನ್ಯ ಸಮಸ್ಯೆ, ಇದಕ್ಕಾಗಿ ಮಗುವನ್ನು ಹೀಯಾಳಿಸಬೇಡಿ, ಹೊಡೆದು ಬಡಿದು ಮಾಡುವುದರಿಂದ ಮಗು ಮಾನಸಿಕವಾಗಿ ಕುಗ್ಗುತ್ತದೆಯೇ ವಿನಃ ಸಮಸ್ಯೆ ಪರಿಹಾರವಾಗದು ಎಂದು ಹೇಳಿ ಕಳಿಸಿದೆ.

## ಮಕ್ಕಳು ಹಾಸಿಗೆ ಒದ್ದೆ ಮಾಡುವುದೇಕೆ?

ಮಕ್ಕಳು ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುವುದನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಎನ್ಯುರೆಸಿಸ್' ಎನ್ನುವರು, ಸಾಮಾನ್ಯವಾಗಿ ಮಕ್ಕಳಿಗೆ ಅರಿವಿಗೆ ಬಾರದೆಯೇ ರಾತ್ರಿ ಹಾಸಿಗೆಯಲ್ಲಿ ಮೂತ್ರ ವಿಸರ್ಜಿಸುತ್ತಾರೆ.

ಇದು ವಂಶವಾಹಿಯಿಂದ ಬರುವಂಥದಲ್ಲ. ಪ್ರಾಥಮಿಕ ಹಂತದಲ್ಲಿ ಕಾಣಿಸಿಕೊಳ್ಳುವ ಎನ್ಯುರೆಸಿಸ್‌ನಲ್ಲಿ ಮಕ್ಕಳು ತಮ್ಮ ಮೂತ್ರಕೋಶವನ್ನು ನಿಯಂತ್ರಿಸುವಲ್ಲಿ ವಿಫಲರಾಗುತ್ತಾರೆ. ಅಂತೆಯೇ ದ್ವಿತೀಯ ಹಂತದಲ್ಲಿ ಕಾಣಿಸಿಕೊಳ್ಳುವ ಎನ್ಯುರೆಸಿಸ್‌ನಲ್ಲಿ ಮಕ್ಕಳು ಕೇವಲ ಒಂದು ವರ್ಷದವರೆಗೆ ತಮ್ಮ ಮೂತ್ರಕೋಶವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾದರೂ ಮತ್ತೆ ತಮ್ಮ ಹಳೆಯ ಸ್ಥಿತಿಗೆ ಮರಳುತ್ತಾರೆ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.

ಮಕ್ಕಳಲ್ಲಿ ಕೆಲವೊಮ್ಮೆ 'ಎನ್ಯುರೆಸಿಸ್' ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬರುವುದಲ್ಲದೆ ರಾತ್ರಿ ವೇಳೆ ಅಲ್ಲದೆ ಮಕ್ಕಳಲ್ಲಿ ಅತಿಯಾದ ಒತ್ತಡ ಹಾಗೂ ತೀವ್ರ ಸುಸ್ತಿನ ಸಮಯದಲ್ಲಿ ಕಂಡುಬರುತ್ತದೆ. ಬ್ರಿಟನ್ ದೇಶದಲ್ಲಿ ಎನ್ಯುರೆಸಿಸ್‌ನಿಂದ ಸುಮಾರು 45 ದಶಲಕ್ಷ ಮಕ್ಕಳು ಹಾಗೂ ಯುವಕ ಯುವತಿಯರು ಅವಮಾನವನ್ನೂ ಅನುಭವಿಸಿದ್ದಾರೆ ಎಂದು ಹೇಳಲಾಗಿದೆ. 10ನೇ ವಯಸ್ಸಿನವರಲ್ಲಿ ಸುಮಾರು ಶೇ.7 ಗಂಡುಮಕ್ಕಳಲ್ಲಿ ಹಾಗೂ ಶೇ.3 ಹೆಣ್ಣುಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಮತ್ತೆ 18 ನೇ ವಯಸ್ಸಿನವರಲ್ಲಿ ಶೇ,1 ಗಂಡುಮಕ್ಕಳಲ್ಲಿ ಹಾಗೂ ಶೇ.2 ಹೆಣ್ಣುಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ.

5 ರಿಂದ 8 ವರ್ಷದ ಮಕ್ಕಳಲ್ಲಿ ಅದರಲ್ಲೂ ಹುಡುಗಿಯರಲ್ಲಿ ಸುಮಾರು 2ರಿಂದ 3 ಪಟ್ಟು ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಹಾಗೆಂದು ಈ ಎನ್ಯುರೆಸಿಸ್ ಎಂದಿಗೂ ಗುಣವಾಗುವುದೇ ಇಲ್ಲವೆಂದೇನಿಲ್ಲ. ಗಂಡುಮಕ್ಕಳಲ್ಲಿ ನಿಧಾನಗತಿಯಲ್ಲಿ ಗುಣವಾಗುತ್ತದೆ. ಆದರೆ 4–6 ವರ್ಷದ ಮಕ್ಕಳಲ್ಲಿ ಶೇ.71 ರಷ್ಟು ಇಳಿಮುಖವಾಗುತ್ತದೆ. ಗಂಡುಮಕ್ಕಳಲ್ಲಿ ಕೇವಲ ಶೇ.16ರಷ್ಟು ಇಳಿಮುಖವಾಗುತ್ತದೆ ಎಂಬುದು ಹಾಲೆಂಡ್‌ನಲ್ಲಿ ನಡೆಸಿದ ಅಧ್ಯಯನ ಸಾಬೀತುಪಡಿಸಿದೆ.

### ಕಿವಿಮಾತು

- ಇಂಥ ಕಾಯಿಲೆಯಿಂದ ಬಳಲುವ ಮಕ್ಕಳಿಗೆ ಹೊಡೆಯುವುದು, ಬೈಯುವುದು ಮಾಡಬೇಡಿ.
- ಅವರ ದೌರ್ಬಲ್ಯವನ್ನು ಹೀಯಾಳಿಸಬೇಡಿ. ಇದರಿಂದ ಮಕ್ಕಳು ಕೀಳರಿಮೆಯಿಂದ ನರಳುವಂತಾಗುತ್ತದೆ.
- ಮನೆಯಲ್ಲಿ ಮನಸ್ತಾಪ, ಅಶಾಂತಿ ಇದ್ದರೆ ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಮಕ್ಕಳು ಕ್ರೌರ್ಯದ ದೃಶ್ಯಗಳನ್ನು ವೀಕ್ಷಿಸುವುದನ್ನು ತಪ್ಪಿಸಿ. ಮಕ್ಕಳಿಗೆ ಬೇರೆ ಕಾಯಿಲೆ ಇದ್ದರೆ ಅದಕ್ಕೆ ಕೊಡುವ ಔಷಧಿಗಳ ಬಗ್ಗೆ ಎಚ್ಚರವಿರಲಿ.

## ಎನ್ಯುರೆಸಿಸ್‌ಗೆ ಕಾರಣಗಳೇನು?

ಎನ್ಯುರೆಸಿಸ್ ಕಾಣಿಸಿಕೊಳ್ಳಲು ಅನೇಕ ಜೈವಿಕ ಸ್ಥಿತಿಗತಿಗಳು ಕಾರಣವಾಗುತ್ತದೆ. ಮೆದುಳಿನ ಸರಿಯಾದ ಬೆಳವಣಿಗೆ ಆಗದಿರುವುದು, ವೈದ್ಯಕೀಯ ಕಾರಣವಾದ ಔಷಧಿಗಳ ಅಡ್ಡಪರಿಣಾಮದಿಂದಿರಬಹುದು ಅಥವಾ ಮೂತ್ರಕೋಶಗಳು ಕಡಿಮೆ ಸಾಮರ್ಥ್ಯ ಹೊಂದಿದಲ್ಲಿ ಈ ಸಮಸ್ಯೆ ಕಂಡುಬರುತ್ತದೆ.

## ಇತರ ಕಾರಣಗಳೆಂದರೆ

- ಎಳೆಯ ವಯಸ್ಸಿನಲ್ಲಿ ಸರಿಯಾದ ಮೂತ್ರ ವಿಸರ್ಜನೆ ಕ್ರಮದ ಬಗ್ಗೆ ತಿಳಿದುಕೊಳ್ಳದೇ ಇರುವುದು.
- ಭಾವನಾತ್ಮಕವಾಗಿ ತೊಂದರೆಯನ್ನು ಅನುಭವಿಸುತ್ತಿರುವವರು.
- ಮನೆಯಲ್ಲಿ ಯಾವುದಾದರೂ ಕಲಹ ಅಥವಾ ನೆಮ್ಮದಿ ಇರದಿದ್ದಲ್ಲಿ, ಆತಂಕ ಮುಂತಾದವುಗಳು ಕಾಣಿಸಿಕೊಳ್ಳುವುದು.
- ಕೆಲವೊಮ್ಮೆ ಅತಿಯಾದ ಒತ್ತಡವೂ ಒಂದು ಕಾರಣ. ಉದಾಹರಣೆಗೆ: ಒಂದು ಮಗುವು ಮನೆಯವರ ಗಮನವನ್ನು ತನ್ನತ್ತ ಕೇಂದ್ರೀಕರಿಸಿಕೊಳ್ಳಲು ಇಂಥ ವರ್ತನೆಯನ್ನು ತೋರಬಹುದು. ಸಾಮಾನ್ಯವಾಗಿ ಈ ನಡವಳಿಕೆಯು ಮನೆಗೆ ಎರಡನೇ ಮಗು ಬಂದ ಸಂದರ್ಭದಲ್ಲಿ ಕಾಣುವಂಥದ್ದು.
- ಮಕ್ಕಳಿಗೆ ಒತ್ತಡ ಕಡಿಮೆ ಮಾಡುವುದು, ಪ್ರೀತಿಯಿಂದ ಮಾತನಾಡಿಸುವುದು ಮೊದಲ ಚಿಕಿತ್ಸೆ. ಇದಕ್ಕಾಗಿ ಗುಳಿಗೆ, ಸಿರಪ್‌ಗಳ ಅವಶ್ಯಕತೆ ಇಲ್ಲ. ಮಲಗುವ ಮುನ್ನ ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಮೂತ್ರ ಮಾಡಿಸಿ. ಸಾಧ್ಯವಾದರೆ ಮಧ್ಯೆ ಒಮ್ಮೆ ಎದ್ದೇಳಿಸಿ ಮೂತ್ರ ಮಾಡಿಸಿ ಬನ್ನಿ. ಆಪ್ತ ಸಲಹೆ ಮತ್ತು ಸರಿಯಾದ ಗಮನ, ಆರೈಕೆ ಇವೇ ಮುಖ್ಯ. ■